<u>ಕರ್ನಾಟಕ ವಿಧಾನಪರಿಷತ್</u>

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1112 |
| 2 ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರ ಕ್ಷೇತ್ರ) |
| 3 ಉತ್ತರಿಸಬೇಕಾಗಿದ್ದ ದಿನಾಂಕ | : | 25.07.2024 |
| 4 ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಬಂದೋಬಸ್ತ್‌ಗೆ ನಿಯೋಜನೆ ಹೊಂದಿದ ಪೊಲೀಸರಿಗೆ ನೀಡುವ ದಿನ ಭತ್ಯೆ ಎಷ್ಟು; ಸದರಿ ಮೊತ್ತವನ್ನು ಯಾವಾಗ ನಿಗದಿಗೊಳಿಸಲಾಗಿದೆ; ಎಷ್ಟು ಅವಧಿಗೆ ಭತ್ಯೆಯನ್ನು ನೀಡಲಾಗುತ್ತದೆ.</td><td>ದಿನಭತ್ಯೆಗಳನ್ನು ಕೆ.ಸಿ.ಎಸ್.ಆರ್. ನಿಯಮ-451 ರ ಮೇರೆಗೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳಂತೆ ನೀಡಲಾಗುತ್ತಿದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಆಇ 1 ಸನಿತ 2019, ದಿನಾಂಕ:11-01-2019 ರನ್ವಯ ದಿನ ಭತ್ಯೆಯನ್ನು ಪ್ರತಿದಿನಕ್ಕೆ ಈ ಕೆಳಗಿನಂತೆ ಪಾವತಿ ಮಾಡಲಾಗುತ್ತಿದೆ.<br><br>
<table>
<tr><th colspan="4">ರಾಜ್ಯದಲ್ಲಿ ತಂಗುವಿಕೆ</th></tr>
<tr><th>ಪ್ರವರ್ಗ</th><th>ಬೆಂಗಳೂರು</th><th>ಮಹಾನಗರ ಪಾಲಿಕೆ ಹೊಂದಿರುವ ನಗರಗಳು</th><th>ಇತರೆ</th></tr>
<tr><td>IA& IB</td><td>600</td><td>500</td><td>400</td></tr>
<tr><td>II</td><td>400</td><td>400</td><td>300</td></tr>
<tr><td>III</td><td>300</td><td>300</td><td>200</td></tr>
<tr><td>IV</td><td>300</td><td>300</td><td>200</td></tr>
</table>
ಕೆ.ಸಿ.ಎಸ್. ನಿಯಮ-514 ರನ್ವಯ ದಿನಭತ್ಯೆಯನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡಿ ಪಾವತಿ ಮಾಡಲಾಗುತ್ತಿದೆ.<br><br>
<table>
<tr><td>ಮೊದಲ 6 ಗಂಟೆ ತಂಗುವುದಕ್ಕೆ</td><td>ಇಲ್ಲ</td></tr>
<tr><td>6 ಗಂಟೆ ಮೀರಿ ಆದರೆ 12 ಗಂಟೆ ಮೀರದಷ್ಟು ಅವಧಿಗೆ ತಂಗುವುದಕ್ಕೆ</td><td>ಅರ್ಧ ದಿನದ ಭತ್ಯೆ</td></tr>
<tr><td>12 ಗಂಟೆ ಮೀರಿ ಆದರೆ 24 ಗಂಟೆಗಳನ್ನು ಮೀರದಷ್ಟು ಅವಧಿ ತಂಗುವುದಕ್ಕೆ</td><td>ಪೂರ್ಣ ದಿನದ ಭತ್ಯೆ</td></tr>
</table>
ಕೆ.ಸಿ.ಎಸ್ ನಿಯಮ-518 ರನ್ವಯ ಮೊದಲನೆ 30 ದಿನಗಳಿಗೆ ಪೂರ್ಣದಿನ ಭತ್ಯೆ ನಂತರದ 60 ದಿನಗಳಿಗೆ ಸಾಮಾನ್ಯ ದರದ ಅರ್ಧದಷ್ಟು ದಿನಭತ್ಯೆಯನ್ನು ಪಾವತಿ ಮಾಡಲಾಗುತ್ತಿದೆ.</td></tr>
<tr><td>ಆ)</td><td>ದಿನ ಭತ್ಯೆಗೆ ಅರ್ಹರಿರುವ ಪೊಲೀಸರಿಗೆ ಆಹಾರ ಭತ್ಯೆ ನೀಡಲಾಗುವುದೇ; ದಿನ ಭತ್ಯೆಗೆ</td><td>ಡಿಜಿ & ಐಜಿಪಿ ರವರ ಕಚೇರಿಯ ಸುತ್ತೋಲೆ ಸಂಖ್ಯೆ ಲೆಕ್ಕ(1)/27/1989-90, ಮೇ 1993 ರನ್ವಯ</td></tr>
</table>

| | | |
|---|---|---|
| | ಅರ್ಹರಿರುವವರಿಗೆ ಆಹಾರ ಭತ್ಯೆ ನೀಡಬಾರದು ಎನ್ನುವ ಆದೇಶವಿದೆಯೇ; ಇದ್ದಲ್ಲಿ, ಸದರಿ ಆದೇಶದ ಪ್ರತಿಯನ್ನು ನೀಡುವುದು. | ದಿನಭತ್ಯೆಗೆ ಯಾವ ಸಿಬ್ಬಂದಿ ವರ್ಗದವರು ಅರ್ಹರಿರುತ್ತಾರೋ ಅಂತಹವರು ಆಹಾರ ಭತ್ಯೆಗೆ ಅರ್ಹರಲ್ಲ ಎಂದು ತಿಳಿಸಲಾಗಿರುತ್ತದೆ. |
| ಇ) | ಕೆಲವು ಸ್ಥಳಗಳಲ್ಲಿ ಉಪಹಾರ ದೊರೆಯದ ಕಾರಣ ಇಲಾಖೆಯ ವತಿಯಿಂದ ಊಟದ ಜೊತೆಗೆ ದಿನ ಭತ್ಯೆಯನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಹಬ್ಬ ಹರಿದಿನಗಳು, ವಿಶೇಷ ಹಾಗೂ ಚುನಾವಣೆ ಸಂದರ್ಭಗಳಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ಆಹಾರ ಭತ್ಯೆ Allowance/Feeding Charges) ದರವನ್ನು ರೂ.200 ರಿಂದ ರೂ.300/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ. |
| ಈ) | ಬಂದೋಬಸ್ತ್ ಕರ್ತವ್ಯಗಳಿಗೆ ನಿಯೋಜನೆ ಹೊಂದುವ ಪೊಲೀಸರಿಗೆ ಹಲವು ಕಡೆ ಸರಿಯಾದ ಊಟ ಮತ್ತು ಮೂಲ ಸೌಕರ್ಯ ಸಿಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರಿಗೆ ಸರಿಯಾದ ಉಪಹಾರ ಮತ್ತು ಇತರೆ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು? | ಬಂದೋಬಸ್ತ್ ಕರ್ತವ್ಯಗಳಿಗೆ ನಿಯೋಜನೆ ಹೊಂದುವ ಪೊಲೀಸರಿಗೆ ಉತ್ತಮ ಗುಣಮಟ್ಟದ ಹಾಗೂ ಸಾಕಷ್ಟು ಪ್ರಮಾಣದ ಊಟ ಮತ್ತು ಉಪಹಾರವನ್ನು ನೀಡಲು ಹಾಗೂ ಇತರೆ ಮೂಲ ಸೌಕರ್ಯಗಳನ್ನು ಅಗತ್ಯತೆ ಮೇರೆಗೆ ಸಂಬಂಧಪಟ್ಟ ಘಟಕಾಧಿಕಾರಿಗಳು ಒದಗಿಸುತ್ತಾರೆ. |

ಹೆಚ್‌ಡಿ 173 ಪಿಸಿಎಸ್ 2024

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು